153 ನೇ
ನಿ-72
SL No-121



**ಕರ್ನಾಟಕ ವಿಧಾನ ಪರಿಷತ್**
**153 ನೇ ಅಧಿವೇಶನ-2024**

| ನಿಯಮ-72ರಡಿಯ ಸೂಚನೆ | |
|---|---|
| ಸೂಚನೆ ನೀಡಿದ ಸದಸ್ಯರ ಹೆಸರು | ಡಾ.ಧನಂಜಯ ಸರ್ಜಿ, ವಿಧಾನಪರಿಷತ್ತಿನ ಮಾನ್ಯ ಸದಸ್ಯರು |

## ಸೂಚನೆಯ ವಿಷಯ

ತುಂಗಾ ನದಿಯ ತೀರ ಪ್ರದೇಶಗಳಲ್ಲಿ ಮಣ್ಣಿನ ಪರೀಕ್ಷೆ ಮಾಡಿಸದೆ, ಅವ್ಯಾಹತವಾಗಿ ರಾಸಾಯನಿಕ ಗೊಬ್ಬರ ಬಳಕೆಮಾಡುತ್ತಿರುವುದರಿಂದ ತುಂಗಾ ನದಿ ನೀರಿನಲ್ಲಿ ಅಲ್ಯೂಮಿನಿಯಂ ಅಂಶವು ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿ .ನೀರು ಮಲಿನಗೊಂಡಿದೆ. ನೀರು ಶುದ್ಧೀಕಣರದ ಬಳಿಕವೂ, ಮನೆ-ಮನೆಗೆ ನಲ್ಲಿಯ ಮೂಲಕವೂ ಸರಬರಾಜಾಗುತ್ತಿರುವ ನೀರಿನಲ್ಲಿ ಅಧಿಕ ಪ್ರಮಾಣದಲ್ಲಿ ಅಲ್ಯೂಮಿನಿಯಂ ಅಂಶ ಇರುವುದು ಮಾಲಿನ್ಯ ನಿಯಂತ್ರಣ ಮಂಡಳಿ ವರದಿಯಲ್ಲಿ ದೃಢಪಟ್ಟಿರುವುದು, ನರಮಂಡಲದ ದುಶ್ಪರಿಣಾಮ ಸೇರಿದಂತೆ ಗಂಭೀರ ಆರೋಗ್ಯ ಸಮಸ್ಯೆಗಳು ತಲೆದೋರುವ ಆತಂಕದ ಕುರಿತು ಹಾಗೂ ಪ್ರತಿ ತಾಲ್ಲೂಕುಗಳಲ್ಲಿ- ಪಂಚಾಯತ್‌ಗಳಲ್ಲಿ ಮಣ್ಣು ಪರೀಕ್ಷೆ ಲ್ಯಾಬ್ ಸ್ಥಾಪಿಸುವುದರೊಂದಿಗೆ, ರೈತರು ರಾಸಾಯನಿಕ ರಸಗೊಬ್ಬರ ಬಳಕೆ ಮಾಡುವುದನ್ನು ನಿಯಂತ್ರಿಸುವ ಕುರಿತು.

## ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಯೋಗಾಲಯಗಳಲ್ಲಿ ರಾಷ್ಟ್ರೀಯ ನದಿ ನೀರು ಮಾಪನ ಕಾರ್ಯಕ್ರಮದಡಿ ತುಂಗಾ ನದಿ, ಭದ್ರಾ ನದಿ ಹಾಗೂ ತುಂಗಾ ಭದ್ರಾ ನದಿಗಳ 18 ಸ್ಥಳಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಲೋಹದ ಪರಿಮಾಣಗಳಾದ ತಾಮ್ರ (Copper), ಸೀಸ (Lead), ಸತು (Zinc), ನಿಕ್ಕಲ್ (Nickel), ಕಬ್ಬಿಣ (Iron), ಮ್ಯಾಂಗನೀಸ್ (Manganese), ಕ್ಯಾಡ್ಮಿಯಂ ((Cadmium), ಕ್ರೋಮಿಯಂ (Chromium) ಹಾಗೂ ಅಲ್ಯೂಮಿನಿಯಂ (Aluminium) ಇರುವಿಕೆ ಬಗ್ಗೆ ವಿಶ್ಲೇಷಿಸಲಾಗುತ್ತಿರುತ್ತದೆ.

ಬಳಕೆ ಮತ್ತು ಚಟುವಟಿಕೆಗಳ ಆಧಾರಿತ ಪ್ರಾಥಮಿಕ ಜಲ ಗುಣಮಟ್ಟದ ಮಾನದಂಡಗಳಿಗನುಗುಣವಾಗಿ ಜಲಮೂಲಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 'ಎ' 'ಬಿ', 'ಸಿ', 'ಡಿ', ಮತ್ತು 'ಇ' ವರ್ಗಗಳಾಗಿ ವರ್ಗೀಕರಿಸಲಾಗಿದ್ದು, ಈ ವರ್ಗೀಕರಣದಲ್ಲಿ ಲೋಹದ ಪರಿಮಾಣುಗಳಿಗೆ ಸಂಬಂಧಿಸಿದಂತೆ ಯಾವುದೇ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲ.

ನದಿದಂಡೆಯ ಮಣ್ಣಿನ ಮಾದರಿಗಳ ವಿಶ್ಲೇಷಣಾ ವರದಿಗಳ ಪ್ರಕಾರ ತುಂಗಾ ನದಿ ಉಗಮಸ್ಥಾನವಾದ ಗಂಗಾ ಮೂಲ ಇಲ್ಲಿ ಅಲ್ಯೂಮಿನಿಯಂ ಪ್ರಮಾಣ 12500 ಮಿಲಿಗ್ರಾಂ/ಕಿಲೋಗ್ರಾಂ ನಷ್ಟಿದ್ದು, ತುಂಗಾ ನದಿಯ ಕೆಳದಂಡ ಸ್ಥಳಗಳಾದ ನೆಮ್ಮಾರು ಗ್ರಾಮದಲ್ಲಿ 9866 ಮಿ.ಗ್ರಾ/ಕಿ.ಗ್ರಾಂ, ಮೆಣಸೆ ಗ್ರಾಮದಲ್ಲಿ 9314 ಮಿ.ಗ್ರಾ/ಕಿ.ಗ್ರಾಂ ಮತ್ತು ತೀರ್ಥಹಳ್ಳಿ ಪಟ್ಟಣ ಪಂಚಯಿತಿ ಮೇಲ್ದಂಡೆ ಹಾಗೂ ಕೆಳದಂಡೆಯಲ್ಲಿ ಅನುಕ್ರಮವಾಗಿ 8176 ಹಾಗೂ 4899ಮಿ.ಗ್ರಾ/ಕಿ.ಗ್ರಾ ರಷ್ಟಿರುತ್ತದೆ. ಶಿವಮೊಗ್ಗ ಮಹಾನಗರ ಪಾಲಿಕೆಯ ಶ್ರೀ ಕೃಷ್ಣ

ರಾಜೇಂದ್ರ ಕುಡಿಯುವ ನೀರು ಶುದ್ಧೀಕರಣ ಘಟ್ಟಕಕ್ಕೆ ನೀರನ್ನು ಒದಗಿಸುವ ಕೇಂದ್ರವಿರುವ ಸ್ಥಳದಲ್ಲಿ 3941 ಮಿ.ಗ್ರಾ/ಕಿ.ಗ್ರಾಂ ಹಾಗೂ ಗಾಜನೂರು ಜಲಾಶಯದ ಕೆಳದಂಡೆಯ ಸ್ಥಳಗಳಲ್ಲಿ 9395 ಮಿ.ಗ್ರಾ/ಕಿ.ಗ್ರಾಂ ರಷ್ಟು ಅಲ್ಯೂಮಿನಿಯಂ ಪ್ರಮಾಣ ಇರುತ್ತದೆ. ವಿಶ್ಲೇಷಣಾ ವರದಿಗಳನುಸಾರ ಶ್ರೀ ಕೃಷ್ಣ ರಾಜೇಂದ್ರ ಕುಡಿಯುವ ನೀರು ಶುದ್ಧೀಕರಣ ಘಟಕದ ತ್ಯಾಜ್ಯ ನೀರು ವಿಸರ್ಜನೆ ಮಾಡುವ ಸ್ಥಳದ ಸಮೀಪವಿರುವ ಮಣ್ಣಿನ ಮಾದರಿಯಲ್ಲಿ 29937 ಮಿ.ಗ್ರಾ/ಕಿ.ಗ್ರಾಂ ಹಾಗೂ ಪಿಳ್ಳಂಗಿರಿ ಗ್ರಾಮದ ಸಮೀಪವಿರುವ ಸ್ಥಳದಲ್ಲಿ 5314 ಮಿ.ಗ್ರಾ/ಕಿ.ಗ್ರಾಂ ರಷ್ಟು ಅಲ್ಯೂಮಿನಿಯಂ ಪ್ರಮಾಣ ಕಂಡುಬಂದಿರುತ್ತದೆ.

ಅಲ್ಯೂಮಿನಿಯಣ ಪರಿಮಾಣವಿನ ಪ್ರಮಾಣದಿಂದ ಮಣ್ಣಿನ ಗುಣಮಟ್ಟವನ್ನು ನಿರ್ಧರಿಸಲು ಯಾವುದೇ ಮಾನದಂಡಗಳ ಮಿತಿಯನ್ನು ನಿಗಧಿಪಡಿಸಿರುವುದಿಲ್ಲ. ಹಾಗೂ ವಿಶ್ಲೇಷಣಾ ವರದಿಯ ಪ್ರಕಾರ ತುಂಗ ನದಿ ಉಗಮ ಸ್ಥಾನದಲ್ಲಿ ಅಲ್ಯೂಮಿನಿಯಂ ಪರಿಮಾಣುವಿನ ಪ್ರಮಾಣ ನೈಸರ್ಗಿಕವಾಗಿ ಹೆಚ್ಚಿರುವುದು ಕಂಡುಬಂದಿದ್ದು ಮಣ್ಣಿನ ಗುಣಲಕ್ಷಣಗಳ ಭೌಗೋಳಿಕ ಸ್ಥಿತಿ ಹಾಗೂ ನೈಸರ್ಗಿಕ ಪ್ರಕ್ರಿಯೆಯಿಂದಲೂ ಸಹಾ ಅಲ್ಯೂಮಿನಿಯಂ ಪರಿಮಾಣುವಿನ ಪ್ರಮಾಣ ನೀರಿನಲ್ಲಿ ಅಲ್ಪ ಮಟ್ಟದಲ್ಲಿ ಸೇರುತ್ತಿರುವ ಸಾಧ್ಯತೆಗಳೂ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಜಲಮೂಲಗಳಿಂದ ನೀರನ್ನು ಕುಡಿಯಲು ಉಪಯೋಗಿಸಬೇಕಾದರೆ, ಶುದ್ಧೀಕರಿಸಿದ ನೀರಿನ ಗುಣಮಟ್ಟವು IS 10500:2012 (Reaffirmed 2018) ಪ್ರಕಾರ ಲೋಹದ ಪರಿಮಾಣುಗಳ ಪ್ರಮಾಣಕ್ಕೆ ಈ ಕೆಳಕಂಡಂತೆ ಮಾನದಂಡಗಳನ್ನು ನಿಗದಿಪಡಿಸಲಾಗಿದೆ.

| Sl. No. | Parameters | Unit | Standard IS 10500:2012 (Reaffirmed 2018) | |
|---|---|---|---|---|
| | | | AL | PL |
| 1. | Copper as Cu | mg/L | 0.05 | 1.5 |
| 2. | Lead as Pb | mg/L | 0.01 | 0.01 |
| 3. | Zinc as Zn | mg/L | 5 | 15 |
| 4. | Nickel as Ni | mg/L | 0.02 | 0.02 |
| 5. | Iron as Fe | mg/L | 1.0 | 1.0 |
| 6. | Manganese as Mn | mg/L | 0.1 | 0.3 |
| 7. | Cadmium as Cd | mg/L | 0.003 | 0.003 |
| 8. | Total Chromium | mg/L | 0.05 | 0.05 |
| 9. | Aluminium | mg/L | 0.03 | 0.2 |

(mg/L=milligram per litter)

1) ತುಂಗಾ ನದಿ ನೀರಿನ ಮಾದರಿಗಳ 12 ಮಾಪನ ಕೇಂದ್ರಗಳ ವಿಶ್ಲೇಷಣಾ ವರದಿಗಳ ಪ್ರಕಾರ ಅಲ್ಯೂಮಿನಿಯಂ ಲೋಹವನ್ನು ಹೊರತುಪಡಿಸಿ ಇನ್ನುಳಿದ ಲೋಹಗಳ ಪ್ರಮಾಣ ನಿಗಧಿಪಡಿಸಿರುವ ಮಾನದಂಡಗಳ ಮಿತಿಯಲ್ಲಿರುತ್ತದೆ.
2) ಭದ್ರಾ ನದಿ ನೀರಿನ ಮಾದರಿಗಳ 04 ಮಾಪನ ಕೇಂದ್ರಗಳ ವಿಶ್ಲೇಷಣಾ ವರದಿಗಳ ಪ್ರಕಾರ ಅಲ್ಯೂಮಿನಿಯಂ ಲೋಹವನ್ನು ಹೊರತುಪಡಿಸಿ ಇನ್ನುಳಿದ ಲೋಹಗಳ ಪ್ರಮಾಣ ನಿಗಧಿಪಡಿಸಿರುವ ಮಾನದಂಡಗಳ ಮಿತಿಯಲ್ಲಿರುತ್ತದೆ.

3) ತುಂಗಾಭದ್ರಾ ನದಿ ನೀರಿನ ಮಾದರಿಗಳ 12ಮಾಪನ ಕೇಂದ್ರಗಳ ವಿಶ್ಲೇಷಣಾ ವರದಿಗಳ ಪ್ರಕಾರ ಅಲ್ಯೂಮಿನಿಯಂ ಲೋಹ ಹೊರತುಪಡಿಸಿ ಇನ್ನುಳಿದ ಲೋಹಗಳ ಪ್ರಮಾಣ ನಿಗದಿತ ಮಾನದಂಡಗಳ ಮಿತಿಯಲ್ಲಿರುವುದು ದೃಢವಾಗಿರುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಯೋಗಾಲಯದ ವರದಿಗಳ ಪ್ರಕಾರ ತುಂಗಾ ನದಿ ನೀರಿನಲ್ಲಿ ನೈಸರ್ಗಿಕವಾಗಿ ಹಾಗೂ ಕುಡಿಯುವ ನೀರು ಸಂಸ್ಕರಣ ಘಟಕಗಳಿಂದ ವಿಸರ್ಜಿಸಲ್ಪಡುವ ತ್ಯಾಜ್ಯ ನೀರಿನಿಂದ ಅಲ್ಯೂಮಿನಿಯಂ ಪರಿಮಾಣುವಿನ ಪ್ರಮಾಣ ಕಂಡುಬಂದಿರುವ ಹಿನ್ನಲೆಯಲ್ಲಿ, ಸಂಬಂಧಪಟ್ಟ ಇಲಾಖೆಗಳಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಇಲಾಖೆ(ಜೀವಿಪರಿಸ್ಥಿತಿ ಹಾಗೂ ಪರಿಸರ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06.01.2024 ರಂದು ಜರುಗಿದ ಸಭೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಹಾಗೂ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲೀಕರಣ ಇಲಾಖೆ ಹಾಗೂ ಪೌರಾಡಳಿತ ನಿರ್ದೇಶನಾಲಯಕ್ಕೆ ಸೂಚನೆಗಳನ್ನು ನೀಡಲಾಗಿದೆ.

**ಅ)** ತುಂಗಾ ನದಿ ನೀರನ್ನು ಸಂಬಂಧಪಟ್ಟ ಪಟ್ಟಣ ಪಂಚಾಯಿತಿ ಹಾಗೂ ಮಹಾನಗರ ಪಾಲಿಕೆಗಳಿಗೆ ಪೂರೈಸುವ ಕೇಂದ್ರಗಳಲ್ಲಿ ಅಲ್ಯೂಮಿನಿಯಂ ಪ್ರಮಾಣ ಕಡಿಮೆ ಇರುವುದನ್ನು ಪರಿಗಣಿಸಿ ಕುಡಿಯುವ ನೀರು ಶುದ್ಧೀಕರಣ ಘಟಕಗಳಿಂದ ಉತ್ಪತ್ತಿಯಾಗುವ ವ್ಯರ್ಥ ತ್ಯಾಜ್ಯ ನೀರನ್ನು ನದಿ ನೀರಿಗೆ ನೇರವಾಗಿ ವಿಸರ್ಜಿಸುವುದನ್ನು ತಡೆಗಟ್ಟಲು ಹಾಗೂ ಈ ವ್ಯರ್ಥ ತ್ಯಾಜ್ಯ ನೀರನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯತೆಯನ್ನು ಮನಗಂಡು, ಶಿವಮೊಗ್ಗ ಮಹಾನಗರ ಪಾಲಿಕೆಯ ಶ್ರೀ ಕೃಷ್ಣ ರಾಜೇಂದ್ರ ಕುಡಿಯುವ ನೀರು ಶುದ್ಧೀಕರಣ ಘಟಕದ ಕಾರ್ಯಾಚರಣೆಯ ಮೌಲ್ಯಮಾಪನದ (Performace Evalution) ಅಧ್ಯಯನವನ್ನು ಭಾರತೀಯ ವಿಜ್ಞಾನ ಸಂಸ್ಥೆಯ ನುರಿತ ವಿಜ್ಞಾನಿಗಳ ಸಹಯೋಗದಲ್ಲಿ ಕೈಗೊಂಡು, ಕುಡಿಯುವ ನೀರು ಸರಬರಾಜನಲ್ಲಿ ಅಲ್ಯೂಮಿನಿಯಂ ಪರಿಮಾಣುವಿನ ಪ್ರಮಾಣವನ್ನು IS 10500:2012 Drinking Water Standards ರ ಪ್ರಕಾರ ನಿಗದಿಪಡಿಸಿರುವ ಮಾನದಂಡಗಳ ಮಿತಿ 0.03 mg/L Acceptable Limit ಹಾಗೂ 0.2 mg/L Permissible Limit ಒಳಗಿರುವಂತಹ ಶುದ್ಧೀಕರಿಸುವ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

**ಆ)** ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಕುಡಿಯುವ ನೀರು ಸಂಸ್ಕರಣ ಘಟಕದಲ್ಲಿ ಉಪಯೋಗಿಸುವ ರಾಸಾಯನಿಕ ವಸ್ತುಗಳಾದ PAC(Poly Aluminum Chloride) ಹಾಗೂ Alum ಇವುಗಳ ಪರಿಶುದ್ಧತೆಯ ಬಗ್ಗೆ, ಶುದ್ಧೀಕರಣ ಘಟಕದಿಂದ ಸಾರ್ವಜನಿಕರಿಗೆ ಸರಬರಾಜು ಆಗುವ ನೀರಿಗೆ Sand Filtration ಘಟಕದಲ್ಲಿ ಸಂಸ್ಕರಿಸಿ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಮರುಬಳಕೆ ಮಾಡಿಕೊಳ್ಳುವ ಬಗ್ಗೆ ವ್ಯವಸ್ಥೆಯನ್ನು ಕಲ್ಪಿಸಿ ಅಲ್ಯೂಮಿನಿಯಂ ಪ್ರಮಾಣವನ್ನು ತಗ್ಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

**ಇ)** ಭಾರತೀಯ ವಿಜ್ಞಾನ ಸಂಸ್ಥೆ ವಿಜ್ಞಾನಿಗಳೊಂದಿಗೆ ನೈಸರ್ಗಿಕ ವಸ್ತುಗಳನ್ನು ಶುದ್ಧೀಕರಣ ಘಟಕದಲ್ಲಿ ಉಪಯೋಗಿಸಿ ಅಲ್ಯೂಮಿನಿಯಂ ಪ್ರಮಾಣವನ್ನು ತಗ್ಗಿಸಲು ತಾಂತ್ರಿಕ ಸಲಹೆಯನ್ನು ಪಡೆದುಕೊಳ್ಳುವಂತೆ ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸೂಚಿಸಲಾಗಿದೆ.

**ಈ)** ಶ್ರೀ ಕೃಷ್ಣ ರಾಜೇಂದ್ರ ಕುಡಿಯುವ ನೀರು ಶುದ್ಧೀಕರಣ ಘಟಕದಿಂದ ಉತ್ಪತ್ತಿಯಾಗುವ ವ್ಯರ್ಥ ತ್ಯಾಜ್ಯ ನೀರನ್ನು ನದಿ ನೀರಿಗೆ ನೇರವಾಗಿ ವಿಸರ್ಜನೆಯಾಗದಂತೆ ತಡೆಗಟ್ಟಿ, ಅಗತ್ಯವಿರುವ ಮರುಬಳಕೆ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಘನ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ Sludge Drying Bed ಹಾಗೂ ಇನ್ನಿತರೆ ವಿಧಾನಗಳಲ್ಲಿ ಸಂಸ್ಕರಿಸಿ ವಿಲೇವಾರಿ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

**ಉ)** ಶೃಂಗೇರಿ ಪಟ್ಟಣ ಪಂಚಾಯಿತಿ ಹಾಗೂ ತೀರ್ಥಹಳ್ಳಿ ಪಟ್ಟಣ ಪಂಚಾಯಿತಿಗಳೂ ಸಹ ಕುಡಿಯುವ ನೀರು ಸಂಸ್ಕರಣ ಘಟಕಗಳನ್ನು ವೈಜ್ಞಾನಿಕ ರೀತಿಯಲ್ಲಿ ಕಾರ್ಯಾಚರಿಸುವ ಹಾಗೂ ವ್ಯರ್ಥ ತ್ಯಾಜ್ಯ ನೀರನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಮರು ಬಳಕೆ ಮಾಡುವ ವಿಧಾನಗಳನ್ನು ಅಳವಡಿಸಿಕೊಂಡು ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

**ಊ)** ಈ ಮೇಲಿನ ಸೂಚಿಸಿರುವ ಕ್ರಮಗಳನ್ನು ಭದ್ರಾ ನದಿಯಿಂದ ಸಾರ್ವಜನಿಕರಿಗೆ ಸರಬರಾಜು ಆಗುವ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳಲ್ಲೂ ಸಹ ಚಿಕ್ಕಮಗಳೂರು ಜಿಲ್ಲಾಡಳಿತ ವತಿಯಿಂದ ಅನುಷ್ಠಾನಗೊಳಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಹಾಗೂ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಅಗತ್ಯ ಕ್ರಮಗಳನ್ನು ಕೈಗೊಂಡು ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

**ಋ)** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ರಾಜ್ಯದ ಎಲ್ಲಾ ನದಿ ಹಾಗೂ ಜಲಾಶಯಗಳ ನೀರಿನಲ್ಲಿರುವ ಅಲ್ಯೂಮಿನಿಯಂ ಪ್ರಮಾಣವನ್ನು ಮಾಪನ ಮಾಡಿ ವರದಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ.

**ಎ)** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ರಾಜ್ಯದ ಎಲ್ಲಾ ನದಿ ಹಾಗೂ ಜಲಾಶಯಗಳ ನೀರಿನಲ್ಲಿ ಅಲ್ಯೂಮಿನಿಯಂ ಪ್ರಮಾಣವನ್ನು ಮಾಪನ ಮಾಡಿ ವರದಿಗಳನ್ನು ಸಲ್ಲಿಸಲು ಸೂಚಿಸಲಾಗಿದೆ.

ಸಾಧ್ಯವಾದಷ್ಟು ತುಂಗಾ ನದಿಯ ನೀರಿನ ಮಾದರಿಗಳನ್ನು ಹಾಗೂ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಮಣ್ಣು ಪರೀಕ್ಷೆ ಲ್ಯಾಬ್‌ಗಳನ್ನು ಸ್ಥಾಪಿಸುವುದು ಹಾಗೂ ರೈತರು ರಾಸಾಯನಿಕ ರಸಗೊಬ್ಬರ ಬಳಕೆ ಮಾಡುವುದನ್ನು ನಿಯಂತ್ರಿಸುವುದು ಕೃಷಿ ಇಲಾಖೆಯ ಅಧಿಕಾರ ವ್ಯಾಪ್ತಿಗೊಳಪಡುತ್ತದೆ.

**<u>ಅಪಜೀ/ 331/ಇಪಿಸಿ/2024</u>**

**(ಈಶ್ವರ್ ಬಿ. ಖಂಡ್ರೆ)**
**ಅರಣ್ಯ, ಜೀವಿಪರಿಸ್ಥಿತಿ ಹಾಗೂ ಪರಿಸರ ಸಚಿವರು**